(19)

**ಮಾನ್ಯ ಸದಸ್ಯರುಗಳಾದ ಶ್ರೀ ಎಸ್.ಎಲ್. ಭೋಜೇಗೌಡ ಮತ್ತು ಶ್ರೀ ತಿಪ್ಪೇಸ್ವಾಮಿ ಕೆ.ವಿ. ರವರುಗಳು ನಿಯಮ 330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಕರಡು ಉತ್ತರ**

**ವಿಷಯ:** ರಾಜ್ಯದ ರೈತರು ಬೆಳೆದ ಪ್ರಮುಖ ಬೆಳೆಗಳಾದ ಅಡಿಕೆ ಹಾಗೂ ತೆಂಗು ಮರಗಳಿಗೆ ಕೀಟನಾಶಕಗಳಿಂದ ರೋಗಗಳು ಬಂದು ರೈತರುಗಳಿಗೆ ತುಂಬಾ ನಷ್ಟವಾಗಿರುತ್ತದೆ.ಆದ್ದರಿಂದ ಸರ್ಕಾರವು ಇವರಿಗೆ ಎಷ್ಟು ಸಹಾಯಧನವನ್ನು ನೀಡಿದೆ ಮತ್ತು ತೋಟಗಾರಿಕೆ ಇಲಾಖೆಯ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಈ ಹಿಂದೆ 2019 ರಿಂದ 2020ನೇ ಸಾಲಿನವರೆಗೆ ಎಷ್ಟು ಸಹಾಯಧನವನ್ನು ನೀಡಲಾಗುತ್ತಿತ್ತು.ನಂತರ 2022-23ನೇ ಸಾಲಿನಲ್ಲಿ ಸದರಿ ಸಹಾಯಧನವನ್ನು ಶೇಕಡವಾರು ಎಷ್ಟು ಮೊತ್ತವನ್ನು ಕಡಿಮೆ ಮಾಡಲಾಗಿದೆ.ಇದಕ್ಕೆ ಕಾರಣಗಳೇನು? ಹಾಗೂ ತೋಟಗಾರಿಕೆ ಇಲಾಖೆಯಿಂದ ಅಳವಡಿಸುತ್ತಿರುವ ಹನಿ ನೀರಾವರಿ ಯೋಜನೆಗಳು ವಿಳಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಸರ್ಕಾರದ ಗಮನಕ್ಕೆ ಬಂದಿದ್ದರೆ ಈ ಹನಿನೀರಾವರಿ ಯೋಜನೆಯನ್ನು ರೈತರಿಗೆ ಅಳವಡಿಸಲು ಶೀಘ್ರ ಗತಿಯಲ್ಲಿ ಸರ್ಕಾರ ಕೂಡಲೆ ಕ್ರಮವಹಿಸಬೇಕೆಂಬುದರ ಕುರಿತು.

**ಉತ್ತರ:** **ಅಡಿಕೆ ಬೆಳೆಯಲ್ಲಿ ಎಲೆಚುಕ್ಕೆ ಹಾಗೂ ಹಳದಿ ಎಲೆ ರೋಗಗಳು ಹಾಗೂ ತೆಂಗು ಬೆಳೆಯಲ್ಲಿ ಕಾಂಡಸೋರುವ ರೋಗ ಹಾಗೂ ಅಣಬೆ ರೋಗಗಳು ಪ್ರಮುಖವಾಗಿದ್ದು, ಈ ರೋಗಗಳು ಶಿಲೀಂದ್ರ ಹಾಗೂ ಫೈಟೋಪ್ಲಾಸ್ಮ (Phytoplasma) ಸೂಕ್ಷ್ಮಾಣುಗಳಿಂದ ಬಂದಿದ್ದು. ರಾಜ್ಯದ ರೈತರು ಬೆಳೆದ ಪ್ರಮುಖ ಬೆಳೆಗಳಾದ ಅಡಿಕೆ ಹಾಗೂ ತೆಂಗು ಮರಗಳಿಗೆ ಕೀಟನಾಶಕಗಳಿಂದ ರೋಗಗಳು ಕಂಡುಬಂದಿರುವುದಿಲ್ಲ. ಇವುಗಳ ನಿಯಂತ್ರಣಕ್ಕೆ ಇಲಾಖಾವತಿಯಿಂದ ಈ ಕೆಳಕಂಡ ಯೋಜನೆಗಳಿಂದ ರೈತರಿಗೆ ಸಹಾಯಧನ ನೀಡಲಾಗಿದೆ.**

- ರಾಜ್ಯವಲಯ ಯೋಜನೆಯಾದ **ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ** ಕಾರ್ಯಕ್ರಮದಡಿ ಸಸ್ಯ ಸಂರಕ್ಷಣಾ ಔಷಧಿ ಖರಿಧಿಗೆ ಸಾಮಾನ್ಯ ವರ್ಗದವರಿಗೆ ಶೇ. 75 ರಷ್ಟು ಪ್ರತಿ ಹೆಕ್ಟೇರ್ ಗೆ ರೂ.7500/- ರಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಶೇ. 90 ರಷ್ಟು ಪ್ರತಿ ಹೆಕ್ಟೇರ್ ಗೆ ರೂ.9000/- ರಂತೆ ಗರಿಷ್ಟ 1 ಹೆಕ್ಟೇರ್ ರವರೆಗೆ ಸಹಾಯಧವನ್ನು ನೀಡಲಾಗಿದೆ.
- ಅಡಿಕೆ ಹಳದಿ ಎಲೆ ರೋಗ ಬಾಧಿತ ಪ್ರದೇಶಗಳಲ್ಲಿ ಅಡಿಕೆ ಬೆಳೆಯ ಬದಲಾಗಿ ಇತರೆ ವಾಣಿಜ್ಯ ತೋಟಗಾರಿಕೆ ಬೆಳೆಗಳಾದ ಬಾಳೆ, ತೆಂಗು, ಕಾಫಿ, ಕೋಕೋ, ಕಾಳುಮೆಣಸು, ಜಾಯಿ ಕಾಯಿ, ಬೆಣ್ಣೆಹಣ್ಣು ಹಾಗೂ ಇತರೆ ಪರ್ಯಾಯ ಬೆಳೆಗಳನ್ನು ಬೆಳೆಯಲು ಘಟಕವೆಚ್ಚದ ಶೇಕಡ 50ರಷ್ಟು ಗರಿಷ್ಟ 4 ಹೆಕ್ಟೇರ್ ರವರೆಗೆ ಮಿತಿಗೊಳಿಸಿ ಸಹಾಯಧನವನ್ನು ನೀಡಲಾಗಿದೆ.
- ಅಡಿಕೆ ಎಲೆ ಚುಕ್ಕೆ ರೋಗದ ನಿಯಂತ್ರಣಕ್ಕೆ ರೈತರಿಗೆ ಪ್ರತಿ ಹೆಕ್ಟೇರ್‌ಗೆ ಗರಿಷ್ಠ ರೂ.4000 ರಂತೆ ಮೊದಲನೆ ಸಿಂಪರಣೆಗೆ ಸಸ್ಯ ಸಂರಕ್ಷಣಾ ಔಷಧಿಗಳನ್ನು ಉಚಿತವಾಗಿ ವಿತರಿಸಲಾಗಿರುತ್ತದೆ.
- ಕೇಂದ್ರ ವಲಯ ಯೋಜನೆಯಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ ಸಮಗ್ರ ಕೀಟ ಮತ್ತು ರೋಗಗಳ ನಿಯಂತ್ರಣ ಕೈಗೊಳ್ಳಲು ಪ್ರತಿ

ಹೆಕ್ಟೇರ್ ಗೆ ಘಟಕ ವೆಚ್ಚ ರೂ.4000/- ಗೆ ಪ್ರತಿ ಹೆಕ್ಟೇರಿಗೆ ಶೇ.30ರಷ್ಟು ರೂ.1200/- ರಂತೆ ಗರಿಷ್ಟ 4 ಹೆಕ್ಟೇರ್ ರವರೆಗೆ ಸಹಾಯಧವನ್ನು ನೀಡಲಾಗುತ್ತಿದೆ.

- ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆ"ಯ ರಾಜ್ಯವಲಯ ಅನುದಾನಿತ ತೆಂಗು ಬೆಳೆಗೆ ತಗಲುವ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆ ಕಾರ್ಯಕ್ರಮದಡಿ ಒಟ್ಟು ಘಟಕ ವೆಚ್ಚದ ಶೇ.50ರಷ್ಟು ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ.8,115/-ರಂತೆ ಪ್ರತಿ ಫಲಾನುಭವಿಗೆ ಗರಿಷ್ಠ 1 ಹೆಕ್ಟೇರ್ ವರೆಗೆ ಮಿತಿಗೊಳಿಸಿ ಸಹಾಯಧನ ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಪ್ರತಿ ಹನಿಗೆ ಅಧಿಕ ಬೆಳೆ-ಸೂಕ್ಷ್ಮ ನೀರಾವರಿ ಕಾರ್ಯಕ್ರಮ (PMKSY-PDMC-MI)ವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದೊಂದಿಗೆ 60:40ರ ಸಹಾಯಧನದ ಅನುಪಾತದಲ್ಲಿ ಯೋಜನೆಯನ್ನು ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇಲಾಖೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.
- ಭಾರತ ಸರ್ಕಾರದ ಮಾರ್ಗಸೂಚಿ ಪ್ರಕಾರ ಸದರಿ ಯೋಜನೆಯಡಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇ.55 ರಷ್ಟು ಹಾಗೂ ಇತರೆ ರೈತರಿಗೆ ಶೇ.45 ರಷ್ಟು ಸಹಾಯಧನವನ್ನು 5.00 ಹೆಕ್ಟೇರ್ ಪ್ರದೇಶಕ್ಕೆ ನೀಡಲು ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಹಾಗೂ ರಾಜ್ಯಪಾಲಿನ ಸಹಾಯಧನದ ಅನುಪಾತದ ವಿವರ ಈ ಕೆಳಕಂಡಂತಿದೆ.

| ರೈತರ ವರ್ಗ | ಕೇಂದ್ರ ಪಾಲು (%) | ರಾಜ್ಯ ಪಾಲು (%) | ಒಟ್ಟು (%) |
|---|---|---|---|
| ಸಣ್ಣ ಹಾಗೂ ಅತೀ ಸಣ್ಣ | 33 | 22 | 55 |
| ಇತರೆ | 27 | 18 | 45 |

- ರಾಜ್ಯ ಸರ್ಕಾರವು ಸೂಕ್ಷ್ಮ ನೀರಾವರಿಯ ಪ್ರಾಮುಖ್ಯತೆ ಹಾಗೂ ಅಗತ್ಯತೆಯನ್ನುಅರಿತು ರೈತರ ಹಿತ ದೃಷ್ಟಿಯಿಂದ **2014-15**ನೇ ಸಾಲಿನಿಂದ **2020-21**ನೇ ಸಾಲಿನವರೆಗೆ ರಾಜ್ಯದ ಪಾಲನ್ನು ಹೆಚ್ಚಿಸಿ ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಿದ ಪ್ರತಿ ರೈತ ಫಲಾನುಭವಿಗೆ ಮೊದಲ **2.00** ಹೆಕ್ಟೇರ್ ಪ್ರದೇಶದವರೆಗೆ ಶೇ.**90** ಮತ್ತು **2.00** ಹೆಕ್ಟೇರ್ ನಿಂದ **5.00** ಹೆಕ್ಟೇರ್‌ವರೆಗೂ ಶೇ.**45**ರಷ್ಟು ಸಹಾಯಧನ ನೀಡಲಾಗಿದೆ. ವಿವರ ಈ ಕೆಳಕಂಡಂತಿದೆ.

| ವರ್ಗ | ಕೇಂದ್ರ ಪಾಲು (%) | ಕಡ್ಡಾಯ ರಾಜ್ಯ ಪಾಲು (%) | ಒಟ್ಟು (%) | ಹೆಚ್ಚುವರಿ ರಾಜ್ಯ ಪಾಲು (%) | ಒಟ್ಟು ರಾಜ್ಯ ಪಾಲು (%) | ಒಟ್ಟು (%) |
|---|---|---|---|---|---|---|
| 2.00 ಹೆಕ್ಟೇರ್‌ವರೆಗಿನ ಸಹಾಯಧನ | | | | | | |
| ಸಣ್ಣ ಹಾಗೂ ಅತೀ ಸಣ್ಣ | 33 | 22 | 55 | 35 | 57 | 90 |
| ಇತರೆ | 27 | 18 | 45 | 45 | 63 | 90 |
| 2.00 ಹೆಕ್ಟೇರ್ ನಿಂದ 5.00 ಹೆಕ್ಟೇರ್ವರೆಗೂ ಸಹಾಯಧನ | | | | | | |
| ಇತರೆ | 27 | 18 | 45 | - | 18 | 45 |

- 2021-22ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ FD 66 Exp-4/2021, ದಿನಾಂಕ: 14-07-2021ರಂತೆ ಸಣ್ಣ ರೈತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ 2.00 ಹೆಕ್ಟೇರ್‌ವರೆಗೆ ಶೇ.90ರಷ್ಟು ಸಹಾಯಧನ ಹಾಗೂ ಎಲ್ಲಾ ವರ್ಗದ ರೈತರಿಗೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ 5.00 ಹೆಕ್ಟೇರ್ ವರೆಗೂ ಶೇ.45 ರಷ್ಟು ಸಹಾಯಧನವನ್ನು ಒದಗಿಸಲು ಕ್ರಮವಹಿಸಲಾಗಿರುತ್ತದೆ.
- 2022-23ನೇ ಸಾಲಿನ ಆಯವ್ಯಯ ಘೋಷಣೆಯಂತೆ 2.00 **ಹೆಕ್ಟೇರ್‌ವರೆಗೆ** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಷ್ಟು ಸಹಾಯಧನ ಹಾಗೂ ಇತರೆ ವರ್ಗದ ರೈತರಿಗೆ ಶೇ.75ರಷ್ಟು ಸಹಾಯಧನವನ್ನು ಒದಗಿಸಲಾಗಿರುತ್ತದೆ ಹಾಗೂ ಎಲ್ಲಾ ವರ್ಗದ ರೈತರಿಗೆ 5.00 ಹೆಕ್ಟೇರ್ ವರೆಗೂ ಶೇ.45ರಷ್ಟು ಸಹಾಯಧನವನ್ನು ಒದಗಿಸಲಾಗಿರುತ್ತದೆ.
- 2023-24ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ರೂ.360.00 ಕೋಟಿಗಳನ್ನು ನಿಗದಿಪಡಿಸಿದ್ದು, ಅದರಂತೆ ರಾಜ್ಯಪಾಲಿನ ಅನುದಾನವನ್ನು ಸೇರಿಸಿ, ಕ್ರಿಯಾಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಕ್ರಮಗಳನ್ನು ಕಾಲಕಾಲಕ್ಕೆ ತೆಗೆದುಕೊಂಡು ಶೀಘ್ರವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.

HORTI 211 HGM 2023

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು